ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 22-01-1976—ಪಾರ್ಟ್- 2

## *ಪರಿವರ್ತನೆಯ ಮೂಲಾಧಾರವಾಗಿದೆ - ಪ್ರತಿಯೊಂದು ಕ್ಷಣ ಸೇವೆಯಲ್ಲಿ ತತ್ಪರರಾಗಿರುವುದು*

(परिवर्तन का मूल आधार- हर सेकेण्ड सेवा में बिज़ी रहना)

**ವಿಶ್ವ ಸೇವಾದಾರಿ, ಮಹಾದಾನಿ ಯಾಗಿ ತಯಾರು ಮಾಡುವ ವರದಾತ ಶಿವ ತಂದೆ ಹೇಳಿದರು**

ಮಹಾರಥಿಗಳ ಆತ್ಮಿಕ ವಾರ್ತಾಲಾಪದಲ್ಲಿ ವಿಶೇಷವಾಗಿ ಯಾವ ವಾರ್ತಲಾಪ ನಡೆಯುತ್ತಿದೆ? ಬಹಳಷ್ಟು ಮಹಾರಥಿಗಳ ವಾರ್ತಾಲಾಪದಲ್ಲಿ ಇದೇ ಮಾತು ಬರುತ್ತದೆ-ಸಮಯದನುಸಾರ ಪರಿವರ್ತನೆ ಹೇಗಾಗಬೇಕು? ಸಮಯ ಮತ್ತು ಸ್ವಯಂನ್ನು ನೋಡುತ್ತಾ ಈ ಪ್ರಶ್ನೆ ಬರುತ್ತದೆ- ಹೇಗಾಗುತ್ತದೆ? ಆದರೆ ಪರಿವರ್ತನೆಗೆ ಮೂಲಾಧಾರವಾಗಿದೆ- ಪ್ರತಿಯೊಂದು ಕ್ಷಣ ಸೇವೆಯಲ್ಲಿ ತತ್ಪರವಾಗಿರುವುದು. ಪ್ರತಿಯೊಂದು ಮಹಾರಥಿಯರಲ್ಲಿ ಸದಾ ಇದೇ ಸಂಕಲ್ಪವಿರಲಿ. ತಮ್ಮ ಸಮಯವೇನಿದೆ ಅದನ್ನು ಸೇವಾರ್ಥವಾಗಿಯೇ ಕೊಡಬೇಕು. ಭಲೆ ತಮ್ಮ ದೇಹ ಅಥವಾ ಶರೀರದ ಅವಶ್ಯಕತೆಯ ಕಾರ್ಯದಲ್ಲಿ ತೊಡಗಿಸುತ್ತಿದ್ದರೂ ಮನಸಾ ವಿಶ್ವಕಲ್ಯಾಣದ ಸೇವೆಯನ್ನು ಜೊತೆಜೊತೆಯಲ್ಲಿ ಮಾಡಲು ಸಾಧ್ಯವಿದೆ. ಒಂದುವೇಳೆ ವಾಚಾ ಮತ್ತು ಕರ್ಮಣಾ ಮಾಡಲು ಸಾಧ್ಯವಿಲ್ಲವೆಂದರೆ ಮನಸಾ ಕಲ್ಯಾಣಕಾರಿ ಭಾವನೆಯ ಸಂಕಲ್ಪವಿದೆಯೆಂದರೆ ಅದೂ ಸಹ ಸೇವೆಯ ಸಬ್ಜೆಕ್ಟ್ ನಲ್ಲಿ ಜಮಾ ಆಗಿಬಿಡುತ್ತದೆ.

ಭಕ್ತಿಮಾರ್ಗದಲ್ಲಿ ಮಹಾದಾನಿ ಎಂದು ಯಾರಿಗೆ ಹೇಳಲಾಗುತ್ತದೆ? ಯಾರು ಸ್ವಯಂನಪ್ರತಿ ಅಲ್ಲದೇ ಪ್ರತಿಯೊಂದು ವಸ್ತು, ಸಮಯ ಮತ್ತೆಲ್ಲವನ್ನೂ ದಾನ, ಪುಣ್ಯ ಮಾಡುವುದರಲ್ಲಿ ತೊಡಗಿಸುತ್ತಾರೆ. ಅವರಿಗೆ ಮಹಾದಾನಿ ಎಂದು ಹೇಳಲಾಗುತ್ತದೆ ಅಂದರೆ ದಾನಿ ಎಂದು ಹೇಳಲಾಗುತ್ತದೆ. ಅವಿನಾಶಿ ದಾನವನ್ನೂ ಮಾಡುತ್ತಿರುತ್ತಾರೆ. ಸದಾ ದಾನವೇ ನಡೆಯುತ್ತಿರುತ್ತದೆ ಅವರನ್ನು ಮಹಾದಾನಿ ಎಂದು ಹೇಳಲಾಗುತ್ತದೆ. ಅದೇರೀತಿ ಸ್ವಯಂಗಾಗಿಯೂ ಸಮಯವನ್ನು ಕೊಡುತ್ತಿದ್ದರೂ ಸದಾ ನಾನು ವಿಶ್ವದ ಸೇವೆಯಲ್ಲಿದ್ದೇನೆ ಎಂದು ತಿಳಿದುಕೊಳ್ಳಬೇಕು. ಹೇಗೆ ಸ್ಟೇಜಿನ ಮೇಲೆ ಕುಳಿತುಕೊಂಡಾಗ, ಕುಳಿತಿರುವಷ್ಟು ಸಮಯ "ನಾನು ಈ ಸಮಯದಲ್ಲಿ ಸೇವೆಯ ಸ್ಟೇಜಿನ ಮೇಲಿದ್ದೇನೆ" ಎಂಬ ವಿಶೇಷ ಗಮನವಿರುತ್ತದೆ ಅಂದಮೇಲೆ ಸಾಧಾರಣವಾಗಿರುವುದಿಲ್ಲ. ಸೇವೆಯ ಪೂರ್ಣಗಮನವಿರುತ್ತದೆ. ಅದೇರೀತಿ ಸದಾ ತಮ್ಮನ್ನು ಸೇವೆಯ ಸ್ಟೇಜಿನಲ್ಲಿದ್ದೇನೆಂದು ತಿಳಿಯಬೇಕು, ಇದರ ಮೂಲಕವೇ ಪರಿವರ್ತನೆಯಾಗುತ್ತದೆ. ಸ್ವಯಂನಲ್ಲಿ ಯಾವುದೆಲ್ಲಾ ಬಲಹೀನತೆಗಳ ಅನುಭವವಾಗುತ್ತದೆ ಅದೆಲ್ಲವೂ ಈ ಸೇವೆಯ ಕಾರ್ಯದಲ್ಲಿ ನಿರಂತರವಾಗಿರುವುದರಿಂದ, ಸೇವೆಯ ಫಲಸ್ವರೂಪವಾಗಿ ಅನ್ಯಆತ್ಮರ ಹೃದಯದಿಂದ ಆಶೀರ್ವಾದದ ಪ್ರಾಪ್ತಿ ಹಾಗೂ ಗುಣಗಾಯನವಾಗುತ್ತದೆ. ಆ ಪ್ರಾಪ್ತಿಯ ಆಧಾರದಿಂದ, ಖುಷಿ ಮತ್ತು ಅದರ ಆಧಾರದಿಂದ ಹಾಗೂ ವ್ಯಸ್ಥರಾಗಿರುವುದರಿಂದ ಕೊರತೆಗಳು ಸಮಾಪ್ತಿಯಾಗಿಬಿಡುತ್ತದೆ. ಅಂದಮೇಲೆ ಪರಿವರ್ತನೆಗೆ ಆಧಾರವೇ ಇದಾಗಿದೆ- ಒಬ್ಬರು ಇನ್ನೊಬ್ಬರಿಗೆ ಗಮನ ತರಿಸುತ್ತಾ ಪ್ರತ್ಯಕ್ಷದಲ್ಲಿ ತರಬೇಕು. ಅದಕ್ಕಾಗಿ ನೆನಪಿನ ಯಾತ್ರೆಯಲ್ಲಿ ಸ್ಥಿತರಾಗುವುದೂ ಸಹ ವರ್ತಮಾನ ಸಮಯದ ವಿಶ್ವಕಲ್ಯಾಣಕಾರಿಯ ಸ್ಥಿತಿಯನುಸಾರ ಸೇವೆಯಲ್ಲಿ ಜಮಾ ಆಗಿಬಿಡುತ್ತದೆ ಏಕೆಂದರೆ ಈಗ ಮಹಾರಥಿಗಳ ನೆನಪಿನ ಯಾತ್ರೆಯ ಸಮಯವು ಕೇವಲ ಸ್ವಯಂಗಾಗಿ ಇರುವುದಿಲ್ಲ. ಆದರೆ ನೆನಪಿನ ಯಾತ್ರೆಯ ಸಮಯವೂ ಸಹ ಸ್ವಯಂನ ಜೊತೆಜೊತೆಗೆ ಸರ್ವರ ಕಲ್ಯಾಣ ಹಾಗೂ ಸರ್ವರ ಸೇವೆಗಾಗಿ ಇರುವುದಾಗಿದೆ. ಸ್ವಯಂ ತಾವು ಅನುಭವ ಮಾಡುವುದಕ್ಕಾಗಿ ಬಹಳ ಸಮಯ ಸಿಕ್ಕಿದೆ ಆದರೆ ಈಗ ಮಹಾದಾನಿ ಮತ್ತು ವರದಾನಿಯ ಸ್ಟೇಜ್ ಆಗಿದೆ.

(ಅವ್ಯಕ್ತ ಬಾಪ್‌ದಾದಾರವರು ಪುನಃ ಕೇಳಿದರು) ಅಂದಮೇಲೆ ಮಹಾರಥಿಯ ಪರಿಭಾಷೆಯೇನಾಯಿತು? ಮಹಾರಥಿ ಅರ್ಥಾತ್ ಡಬಲ್ ಕಿರೀಟಧಾರಿ, ಅರ್ಥಾತ್ ಡಬಲ್ ಸೇವಾಧಾರಿ. ಸ್ವಯಂನ ಹಾಗೂ ಸರ್ವರ ಸೇವೆ- ಇದರ ಬ್ಯಾಲೆನ್ಸ್ ಇರಬೇಕು ಇವರಿಗೆ ಮಹಾರಥಿ ಎಂದು ಹೇಳಲಾಗುತ್ತದೆ. ಮಕ್ಕಳ ಬಾಲ್ಯದಲ್ಲಿಯ ಸಮಯವು ಸ್ವಯಂಗಾಗಿ ಇರುತ್ತದೆ ಮತ್ತು ಜವಾಬ್ದಾರ ಆತ್ಮರ ಸಮಯವು ಸೇವೆಗಾಗಿ ಇರುತ್ತದೆ. ಅಂದಮೇಲೆ ಕುದುರೆಸವಾರ ಮತ್ತು ಕಾಲಾಳುಗಳ ಸಮಯವು ಸ್ವಯಂನಪ್ರತಿ ಹೆಚ್ಚಿನದಾಗಿರುತ್ತದೆ. ಸ್ವಯಂ ಬೇಸರವಾಗುತ್ತಾರೆ, ಕೆಲವೊಮ್ಮೆ ಧಾರಣೆ ಮಾಡಿಕೊಳ್ಳುತ್ತಾರೆ. ಕೆಲವೊಮ್ಮೆ ಧಾರಣೆಯಲ್ಲಿಯೂ ಫೇಲ್ ಆಗುತ್ತಿರುತ್ತಾರೆ. ಕೆಲವೊಮ್ಮೆ ತೀವ್ರ ಪುರುಷಾರ್ಥದಲ್ಲಿ, ಕೆಲವೊಮ್ಮೆ ಸಾಧಾರಣ ಪುರುಷಾರ್ಥಲ್ಲಿರುತ್ತಾರೆ. ಕೆಲವೊಮ್ಮೆ ಕೆಲವರ ಸಂಸ್ಕಾರದಿಂದ ಯುದ್ಧವಾಯಿತೆಂದರೆ, ಮತ್ತೆ ಕೆಲವೊಮ್ಮೆ ಮತ್ತೊಬ್ಬರ ಸಂಸ್ಕಾರದೊಂದಿಗೆ ಯುದ್ಧವಾಗುತ್ತದೆ. ಅಂಥಹವರು ಸ್ವಯಂನಪ್ರತಿ ಹೆಚ್ಚಿನದಾಗಿ ಸಮಯವನ್ನು ಕಳೆಯುತ್ತಾರೆ. ಆದರೆ ಮಹಾರಥಿಗಳು ಈ ರೀತಿ ಮಾಡುವುದಿಲ್ಲ. ಹೇಗೆ ಮಕ್ಕಳಿರುತ್ತಾರೆ- ಆಟಿಕೆಯ ಜೊತೆ ಆಟವೂ ಆಡುತ್ತಿರುತ್ತಾರೆ. ಸರಿಪಡಿಸುತ್ತಲೂ ಇರುತ್ತಾರೆ ಮತ್ತು ಹಾಳು ಮಾಡುತ್ತಲೂ ಇರುತ್ತಾರೆ. ಕಾಲಾಳುಗಳೂ ಸಹ ತನ್ನ ಸಂಸ್ಕಾರಗಳೆಂಬ ಆಟಿಕೆಯೊಂದಿಗೆ ಕೆಲವೊಮ್ಮೆ ಆಟವಾಡುತ್ತಾ, ಕೆಲವೊಮ್ಮೆ ಬೇಸರವಾಗುತ್ತಾ, ಕೆಲವೊಮ್ಮೆ ಸರಿಪಡಿಸುತ್ತಿರುತ್ತಾರೆ, ಕೆಲವೊಮ್ಮೆ ವಶೀಭೂತರಾಗುತ್ತಾರೆ ಮತ್ತೆ ಕೆಲವೊಮ್ಮೆ ಅವರನ್ನು ವಶೀಭೂತರನ್ನಾಗಿ ಮಾಡಿಬಿಡುತ್ತದೆ ಆದರೆ ಇದು ಬಾಲ್ಯತನದ ಚಿಹ್ನೆಯಾಯಿತು, ಮಹಾರಥಿಗಳದಲ್ಲ. ಒಳ್ಳೆಯದು-

ಅವ್ಯಕ್ತ ಮುರಳಿ 22-01-1976--ಪಾರ್ಟ್-2

***ಪರಿವರ್ತನೆಯ ಮೂಲ ಆಧಾರ ಪ್ರತಿಯೊಂದು ಕ್ಷಣ ಸೇವೆಯಲ್ಲಿ ತತ್ಪರರಾಗಿರುವುದು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಸೇವೆಯಲ್ಲಿ ತತ್ಪರವಾಗಿರುವ ಪರಿವರ್ತನಾ ಸ್ವರೂಪ.

2. ನಾನು ಸದಾ ಅವಿನಾಶಿ ದಾನವನ್ನು ಮಾಡುವ ಮಹಾದಾನಿ.

3. ನಾನು ನೆನಪಿನ ಯಾತ್ರೆಯ ಸಮಯವೂ ಸಹ ಸ್ವಯಂನ ಜೊತೆ ಜೊತೆಗೆ ಸರ್ವರ ಕಲ್ಯಾಣ ಹಾಗೂ ಸರ್ವರ ಸೇವೆಯನ್ನು ಮಾಡುವ ಮಹಾರಥಿ.

4. ನಾನು ಸ್ವಯಂನ ಹಾಗೂ ಸರ್ವರ ಸೇವೆಯನ್ನು ಬ್ಯಾಲೆನ್ಸ್ ಮಾಡುವ ಡಬಲ್ ಕಿರೀಟಧಾರಿ.